ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ., ಮೈಸೂರು-570017
ದೂರವಾಣಿ ಸಂಖ್ಯೆ : 0821-2417106

**CHAMUNDESHWARI ELECTRICITY SUPPLY CORPORATION LIMITED**
**(A Government of Karnataka Undertaking)**
Corporate Office,CESC, Mysuru-570017
**website:https://cescmysore.karnataka.gov.**
**E-mail ID:-cfo@cescmysore.org**

**Company Identity Number [CIN]:-U40109KA2004SGC035177**

ಕ್ರಮಾಂಕ: ಸೆಸ್ಕ್/ಕಂದಾಯ/02/E-42800/2022-23/ cys-1885 ದಿನಾಂಕ: 20.03.2023
3 1 MAR 2023
ಲಗತ್ತು:

**ಸುತ್ತೋಲೆ**

ವಿಷಯ: ಗ್ರಾಮ ಒನ್ ಕೇಂದ್ರಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕೇಂದ್ರ ಸ್ಥಾನಗಳಲ್ಲಿ ವಿದ್ಯುತ್ ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಿರುವ ಬಗ್ಗೆ.

ಉಲ್ಲೇಖ : ಚಾವಿಸನಿನಿ ಮತ್ತು ಕರ್ನಾಟಕ ಒನ್ ನಡುವೆ ದಿನಾಂಕ 01.06.2022 ರಿಂದ ಜಾರಿಗೆ ಬರುವಂತೆ ಮಾಡಿಕೊಂಡಿರುವ ಕರಾರು

*****

ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರದ ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ (EDCS) ಇಲಾಖೆಯೊಂದಿಗೆ ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲಾ ಕೇಂದ್ರಗಳಲ್ಲಿ ಕರ್ನಾಟಕ ಒನ್ ಕೇಂದ್ರಗಳಿಂದ ವಿದ್ಯುತ್ ಶುಲ್ಕ ವಸೂಲಿ ಮಾಡಲಾಗುತ್ತಿರುವುದು ತಮಗೆಲ್ಲ ತಿಳಿದಿರುವ ವಿಷಯವೆ ಆಗಿರುತ್ತದೆ.

ರಾಜ್ಯ ಸರ್ಕಾರದ ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ ತನ್ನ ಎಲ್ಲಾ ಸೇವೆಗಳನ್ನು ಗ್ರಾಮೀಣ ಮಟ್ಟದಲ್ಲಿ ಹಾಗೂ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಂದೇ ಸೂರಿನಡಿ ನೀಡಲು ಕ್ರಮ ಕೈಗೊಂಡಿದ್ದು ಅವುಗಳಲ್ಲಿ ವಿದ್ಯುತ್ ಶುಲ್ಕವನ್ನು ನಗದು ಮೂಲಕ ಹಾಗೂ ನಗದು ರಹಿತವಾಗಿ ವಸೂಲಾತಿ ಮಾಡಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಜಮಾ ಮಾಡುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಈ ಮೇಲಿನ ಸಂಬಂಧ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದ ಸಾರ್ವಜನಿಕರಿಗೆ ಹಲವಾರು ಸರ್ಕಾರಿ ಸೇವೆಗಳನ್ನು ನೀಡಲು ಗ್ರಾಮ ಒನ್ ಕೇಂದ್ರಗಳನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು ಈ ಗ್ರಾಮ ಒನ್ ಕೇಂದ್ರಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯ ಗ್ರಾಹಕರುಗಳಿಂದ ವಿದ್ಯುತ್ ಬಿಲ್ಲುಗಳ ಶುಲ್ಕವನ್ನು ಸ್ವೀಕರಿಸುವುದು ಹಾಗೂ ಸ್ವೀಕರಿಸಿದ ವಿದ್ಯುತ್ ಶುಲ್ಕಕ್ಕೆ ಗ್ರಾಹಕರಿಗೆ ರಶೀದಿ ನೀಡಿ ಸ್ವೀಕರಿಸಿದ ಮೊತ್ತವನ್ನು ನಿಗಮವು ಈಗಾಗಲೇ ತೆರೆದಿರುವ AXIS BANK ಖಾತೆಗೆ ಜಮಾಗೊಳಿಸುವುದು ಎಂದು ಒಪ್ಪಂದವನ್ನು ಉಲ್ಲೇಖದ ಕರಾರುವಿನಲ್ಲಿ ಮಾಡಿಕೊಳ್ಳಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ನಿಗಮದ ಎಲ್ಲಾ ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ ತಮ್ಮ ವಿದ್ಯುತ್ ಶುಲ್ಕವನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮತ್ತು ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಒನ್ ಕೇಂದ್ರಗಳಲ್ಲಿಯು ಸಹಾ ಪಾವತಿಸಬಹುದಾಗಿರುತ್ತದೆ ಎಂದು ವ್ಯಾಪಕ ಪ್ರಚಾರ ಮಾಡುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಶುಲ್ಕ ವಸೂಲಿಗೆ ನಿಯೋಜಿಸುವ ಬದಲು ಆಯಾಯ ಗ್ರಾಮಗಳಲ್ಲೇ ಇರುವ ಗ್ರಾಮ ಒನ್ ಕೇಂದ್ರಗಳಲ್ಲಿ ವಿದ್ಯುತ್ ಶುಲ್ಕ ನಗದು ರೂಪದಲ್ಲಿ ಅಥವಾ ನಗದು ರಹಿತವಾಗಿ ಪಾವತಿಸಲು ತಿಳಿಸಲು ಸೂಚಿಸುವುದು.

ಇದರಿಂದ ನಿಗಮಕ್ಕೆ ಕೈಬರಹ ರಶೀದಿ ನೀಡುವುದು ಹಾಗೂ ಕೈಬರಹ ರಶೀದಿಗಳಿಂದ ಹಣ ದುರುಪಯೋಗದಂತಹ ಪ್ರಕರಣಗಳು ತಡೆಯಬಹುದಾಗಿರುತ್ತದೆ ಹಾಗೂ ನಿಗಮಕ್ಕೆ ಯಾವುದೇ ಅಡೆತಡೆ ಇಲ್ಲದೆ ಕಂದಾಯವು ಸ್ವೀಕರಿಸಬಹುದಾಗಿರುತ್ತದೆ. ಮುಂದುವರೆದು ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ ವಸೂಲಿ ಮಾಡಿದ ಕಂದಾಯವನ್ನು T+ 2 ರಲ್ಲಿ ನಿಗಮದ ಬ್ಯಾಂಕ್ ಖಾತೆಗೆ ಯಾವುದೇ ಮಾನವ ಹಸ್ತಕ್ಷೇಪವಿಲ್ಲದೆ ಜಮಾಗೊಳಿಸಲಾಗುತ್ತದೆ ಎಂದು ತಿಳಿಸುವುದು.

ಮುಖ್ಯ ಆರ್ಥಿಕ ಅಧಿಕಾರಿ

ಚಾವಿಸನಿನಿ., ಮೈಸೂರು.

ಪ್ರತಿಗಳು:

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವಲಯ, ಮೈಸೂರು/ಹಾಸನ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
- ಪ್ರಧಾನ ವ್ಯವಸ್ಥಾಪಕರು ಯೋಜನೆ/ವಾಣಿಜ್ಯ/ಆಯವ್ಯಯ ಹಾಗೂ ಸಂಘನ್ಮೂಲ ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
- ನಿಯಂತ್ರಣಾಧಿಕಾರಿ, ಚಾವಿಸನಿನಿ., ಕಾ ಮತ್ತು ಪಾ ವಲಯ, ಮೈಸೂರು/ಹಾಸನ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವೃತ್ತಗಳು,
- ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಚಾವಿಸನಿನಿ.,ಕಾ ಮತ್ತು ಪಾ ವೃತ್ತಗಳು,
- ಉಪ ಪ್ರಧಾನ ವ್ಯವಸ್ಥಾಪಕರು(ಎಂಐಎಸ್), ಚಾವಿಸನಿನಿ., ನಿಗಮ ಕಛೇರಿ, ಮೈಸೂರು ಇವರಿಗೆ ಸದರಿ ಸುತ್ತೋಲೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ.,
- ಎಲ್ಲಾ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗಗಳು, ಹಾಗೂ ಲೆಕ್ಕಾಧಿಕಾರಿಗಳು(ಆಂ.ಪ), ಚಾವಿಸನಿನಿ.,
- ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ., ಕಾರ್ಯ ಮತ್ತು ಪಾಲನೆ ಉಪವಿಭಾಗಗಳು,
- ಆಪ್ತ ಕಾರ್ಯದರ್ಶಿಗಳು ವ್ಯನಿ/ನಿ(ತಾಂ)